112

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 945 (984)

ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದವರು : ಮುಖ್ಯಮಂತ್ರಿಯವರು

ಉತ್ತರಿಸಬೇಕಾದ ದಿನಾಂಕ : 14/12/2023

***

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸರ್ಕಾರಿ ನೌಕರರು/ಅಧಿಕಾರಿಗಳ ಕೊರತೆಯಿಂದಾಗಿ ಹಲವರು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಲ್ಲಿ ಹೆಚ್ಚಿನ ಕಾರ್ಯಭಾರದ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ್ಯೂ, ಅಧಿಕಾರಿಗಳನ್ನಷ್ಟೇ ಪ್ರಭಾರ ವ್ಯವಸ್ಥೆಯಲ್ಲಿರಿಸಿ 'ಪ್ರಭಾರ ಭತ್ಯೆ' ಪಾವತಿಸಲಾಗುತ್ತಿದ್ದು, ಆದರೆ ಬಹುತೇಕ ನೌಕರರು ತನ್ನ ಹುದ್ದೆಯ ಜೊತೆ ಬೇರೊಂದು ಹುದ್ದೆಯ ಕರ್ತವ್ಯ ನಿರ್ವಹಿಸುತ್ತಿದ್ದರೂ ಅವರಿಗೆ 'ಪ್ರಭಾರ ಭತ್ಯೆ' ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 68 ಮತ್ತು 32 ರಂತೆ ಅಧಿಕ ಪ್ರಭಾರದಲ್ಲಿಸಿರುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೂ ಪ್ರಭಾಅ ಭತ್ಯಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. |
| (ಆ) | ಬಂದಿದ್ದಲ್ಲಿ, ಈ ತರಹದ ವ್ಯತ್ಯಾಸವನ್ನು ಸರಿಪಡಿಸಲು ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಉದ್ಭವಿಸುವುದಿಲ್ಲ. |
| (ಇ) | ಸರ್ಕಾರಿ ನೌಕರರು ನಿಯೋಜನೆ ಮೇರೆಗೆ ಬೇರೊಂದು ಕಚೇರಿಯಲ್ಲಿ ತನ್ನ ಸಮಾನ ಹುದ್ದೆಯ ಜೊತೆ ಬೇರೊಂದು ಹುದ್ದೆಯ ಕರ್ತವ್ಯ ನಿರ್ವಹಿಸಿದ್ದಲ್ಲಿ (ಪ್ರಭಾರ ವ್ಯವಸ್ಥೆಯ ಆದೇಶ ಹೊರಡಿಸಿದ್ದಲ್ಲಿ ಅಂತಹ ನೌಕರನಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ರೀತ್ಯಾ ಪ್ರಭಾರ ಭತ್ಯೆ ಪಾವತಿಸಬಹುದೇ ಅಥವಾ ಇಲ್ಲವೇ; (ವಿವರ ನೀಡುವುದು) | ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 68 ರಲ್ಲಿ ತಿಳಿಸಿರುವ ವಿಧಾನವನ್ನು ಅನುಸರಿಸಿ ಮಾಡಲಾದ ಹೆಚ್ಚುವರಿ ಪ್ರಭಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಪ್ರಭಾರ ಭತ್ಯೆ ಪಾವತಿಸಲು ಅವಕಾಶವಿರುತ್ತದೆ. ಸಾಮಾನ್ಯವಾಗಿ ನಿಯೋಜನೆ ಮೇಲಿರುವ ಸರ್ಕಾರಿ ನೌಕರರನ್ನು ಬೇರೊಂದು ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ವಹಿಸತಕ್ಕದ್ದಲ್ಲ. |

| | | |
|---|---|---|
| (ಈ) | ಪ್ರಭಾರ ವ್ಯವಸ್ಥೆಯಲ್ಲಿ ಇರಿಸಿರುವ ಸರ್ಕಾರಿ ಅಧಿಕಾರಿ ಅಥವಾ ನೌಕರನು 'ಪ್ರಭಾರ ಭತ್ಯೆ' ಪಡೆದುಕೊಳ್ಳಲು ಮೂಲ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವುದು ಕಡ್ಡಾಯವೆ; (ವಿವರ ನೀಡುವುದು) | ನಿಯಮ 68 ರಡಿಯಲ್ಲಿ ಪ್ರಭಾರ ಭತ್ಯೆಯನ್ನು ಪಡೆಯಲು ಅಂತಹ ನೌಕರರು ತನ್ನ ಹುದ್ದೆಯ ಕರ್ತವ್ಯಗಳೊಂದಿಗೆ ಮತ್ತೊಂದು ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಬೇಕೆಂಬ ನಿಯಮವಿರುತ್ತದೆ.<br>ಅದೇ ನಿಯಮಾವಳಿಯ ನಿಯಮ 32 ರಲ್ಲಿ ಒಬ್ಬ ಸರ್ಕಾರಿ ನೌಕರನನ್ನ ಯಾವುದೇ ಒಂದು ಖಾಲಿ ಹುದ್ದೆಯಲ್ಲಿ ಕಾರ್ಯನಿರ್ವಹಿಸಲು ನೇಮಕ ಮಾಡುವ ಬದಲಾಗಿ ಅಂತಹ ಖಾಲಿ ಹುದ್ದೆಯ ಪ್ರಭಾರದಲ್ಲಿ ಕಾರ್ಯನಿರ್ವಹಿಸಲು ಅವನನ್ನು ನೇಮಿಸಬಹುದಾಗಿದೆ (ಸ್ವತಂತ್ರ ಪ್ರಭಾರ). ಅಂತಹ ಸಂದರ್ಭದಲ್ಲಿ ನಿಯಮ 68 ರಡಿಯಲ್ಲಿ ಪ್ರಭಾರ ಭತ್ಯೆಯನ್ನು ಕೊಡಬಹುದು. |
| (ಉ) | ಸರ್ಕಾರಿ ನೌಕರನನ್ನು ಪ್ರಭಾರ ವ್ಯವಸ್ಥೆಯಲ್ಲಿ ಇರಿಸಿ ಹೊರಡಿಸಿರುವ ಆದೇಶದಲ್ಲಿ 'ಹೆಚ್ಚುವರಿ ಪ್ರಭಾರ' ಎಂದು ನಮೂದಿಸುವ ಬದಲು "ಪೂರ್ಣ ಪ್ರಭಾರ" (ಪತ್ರ ರಚನೆ ವೇಳೆ ಆಗಿರುವ ಲೋಪ) ಎಂದು ನಮೂದಿಸಿದ್ದಲ್ಲಿ, ನೌಕರನು ತನ್ನ ಹುದ್ದೆಯ ಜೊತೆ ಬೇರೊಂದು ಹುದ್ದೆಯ ಕರ್ತವ್ಯ ನಿರ್ವಹಿಸಿದ್ದಾಗ್ಯೂ ಕೂಡ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ರೀತ್ಯಾ ಪ್ರಭಾರ ಭತ್ಯೆಗೆ ಅರ್ಹನೇ ಅಥವಾ ಇಲ್ಲವೇ? (ವಿವರ ನೀಡುವುದು). | ಒಬ್ಬ ಸರ್ಕಾರಿ ನೌಕರನು, ತನ್ನ ಕರ್ತವ್ಯಗಳ ಜೊತೆಗೆ ಮತ್ತೊಂದು ಹುದ್ದೆಯ ಕರ್ತವ್ಯಗಳ ಪ್ರಭಾರವನ್ನು ಹೊಂದಿರಲು ನೇಮಕವಾದಾಗ ಮತು ಅಂತಹ ಪ್ರಭಾರವು ಸಾಕಷ್ಟು ಹೆಚ್ಚಿನ ಜವಾದ್ಬಾರಿಯನ್ನು ಮತ್ತು ಇನ್ನಷ್ಟು ಹೆಚ್ಚಿನ ಕೆಲಸವನ್ನು ಹೊಂದಿದ್ದರೆ ಹೆಚ್ಚಿನ ವೇತನಕ್ಕೆ (ಪ್ರಭಾರ ಭತ್ಯೆಗೆ) ಹಕ್ಕುಳ್ಳವನಾಗುತ್ತಾನೆ. |

ಆಇ 8 ಎಸ್‌ಆರ್‌ಎಸ್ 2023

(ಸಿದ್ದರಾಮಯ್ಯ)

ಮುಖ್ಯಮಂತ್ರಿ